# ಉನ್ನತ ಶಿಕ್ಷಣದಲ್ಲಿ ಭಾಷೆ ಮತ್ತು ಸಾಹಿತ್ಯ ಬೋಧನೆಯ ಸವಾಲುಗಳು - ಸಾಧ್ಯತೆಗಳು

# CHALLENGES AND POSSIBILITIES OF TEACHING LANGUAGE AND LITERATURE IN HIGHER EDUCATION



ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು - ಸ್ವಾಯತ್ತ, ಹಾಸನ

# ಉನ್ನತ ಶಿಕ್ಷಣದಲ್ಲಿ ಭಾಷೆ ಮತ್ತು ಸಾಹಿತ್ಯ ಬೋಧನೆ : ಸವಾಲುಗಳು - ಸಾಧ್ಯತೆಗಳು

**Challenges and Possibilities of Teaching Language and Literature in Higher Education**

National Level Seminar Articles

**Collected by**
**T.P. Puttaraju**
H.O.D. of Kannada
Govt. Arts, Commerce and Post Graduate College-Autonomous, Hassan - 573201
Mobile: 9611278342 e-mail: tpraju66@gmail.com

**Published by**
**Department of Kannada**
Govt. Arts, Commerce and Post Graduate College-Autonomous, Hassan - 573201

© **Department of Kannada**
Govt. Arts, Commerce and Post Graduate College-Autonomous, Hassan - 573201
All rights are reserved

First Impression : 2020
Pages : XVI+512
Paper used : 80 gsm
Book size : Demmy 1/8th

ISBN : 978-81-945326-1-3

Printed at : Sneha Printers, Bengaluru - 560053

This book is protected by copy right laws. No part of this book is to be reproduced, transmitted, utilized or stored in any form or by any means now known or hereinafter invented, electronic, digital or mechanical, including photocopying, scanning, recording or by any information storage or retrieval system, without prior written permission from the author or publisher.

ISBN : 978-81-945326-1-3

# ಸಂಶೋಧನೆಯಲ್ಲಿ ಭಾಷೆ ಮತ್ತು ಸಾಹಿತ್ಯ

ಡಾ. ಎಂ. ಶಂಕರ
ಪ್ರಾಧ್ಯಾಪಕರು, ಕನ್ನಡ ವಿಭಾಗ
ನಿರ್ದೇಶಕರು, ಹೇಮಗಂಗೋತ್ರಿ (ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ), ಹಾಸನ

'ಉನ್ನತ ಶಿಕ್ಷಣದಲ್ಲಿ ಭಾಷೆ ಮತ್ತು ಸಾಹಿತ್ಯ ಬೋಧನೆಯ ಸವಾಲುಗಳು ಮತ್ತು ಸಾಧ್ಯತೆಗಳು' ಎಂಬ ವಿಷಯದ ಈ ವಿಚಾರ ಸಂಕಿರಣವನ್ನು ಈ ಕಾಲೇಜಿನ ಕನ್ನಡ, ಇಂಗ್ಲಿಷ್, ಸಂಸ್ಕೃತ, ಹಿಂದಿ ವಿಭಾಗಗಳು ಸೇರಿ ನಡೆಸುತ್ತಿರುವುದರಿಂದ ಈ ನಾಲ್ಕೂ ಭಾಷೆ ಮತ್ತು ಸಾಹಿತ್ಯಗಳು ಇದರ ವ್ಯಾಪ್ತಿಯಲ್ಲಿ ಇರುವುವಾದರೂ ಈ ಪ್ರಬಂಧ ಹೆಚ್ಚಾಗಿ ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಮಾತ್ರ ಅನುಲಕ್ಷಿಸಿದುದು ಎಂಬುದನ್ನು ಮೊದಲು ಹೇಳಬೇಕಿದೆ. ವ್ಯಾಪ್ತಿಯ ಈ ಸೀಮಿತತೆಗೆ ಕಾರಣ ನಾನು ಉಳಿದ ಭಾಷೆ ಸಾಹಿತ್ಯಗಳ ಬಗೆಗೆ ಸಾಕಷ್ಟು ತಿಳಿದವನಲ್ಲದಿರುವುದು. ಎರಡು ಕಾರಣಗಳಿಂದ ಈ ಸೀಮಿತತೆ ಸಾಧು ಕೂಡ ಎನಿಸುತ್ತದೆ: ಒಂದು, ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದವರಲ್ಲಿ ಹೆಚ್ಚಿನವರು ಕನ್ನಡದವರೇ ಆಗಿರುವುದು; ಎರಡು, ಸದ್ಯದ ಪರಿಸ್ಥಿತಿಯಲ್ಲಿ ಕರ್ನಾಟಕದಲ್ಲಿ ಈ ಭಾಷೆಗಳು ಕೆಲವು ಸಮಾನ ಸವಾಲುಗಳನ್ನು ಎದುರಿಸುತ್ತಿದ್ದು, ಒಂದರ ಬಗೆಗೆ ಹೇಳಿದುದು ಉಳಿದವಕ್ಕೂ ಅನ್ವಯವಾಗಬಹುದಾಗಿರುವುದು.

ಈ ವಿಚಾರ ಸಂಕಿರಣದ ಪ್ರಧಾನ ವಿಷಯದಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಭಾಷೆ ಮತ್ತು ಸಾಹಿತ್ಯ ಬೋಧನೆ ಬಿಕ್ಕಟ್ಟಿನಲ್ಲಿದೆ ಎಂಬ ಗ್ರಹಿಕೆ ಇದ್ದಂತಿದೆ. ಇದು ಭಾರತೀಯ ಮಟ್ಟದ ಸಮಸ್ಯೆ ಇರಬಹುದು ಅಥವಾ ಕರ್ನಾಟಕಕ್ಕೆ ಸೀಮಿತವಾಗಿರಬಹುದು. ಈ ನಾಲ್ಕು ಭಾಷೆಗಳಲ್ಲಿ ಕನ್ನಡಕ್ಕೆ ಅಸ್ತಿತ್ವದ ಸಮಸ್ಯೆಯೂ ಇದೆ. ಅದು ಈ ನಾಡಿನ ನುಡಿ; ಸುಮಾರು ಎರಡು–ಎರಡೂವರೆ ಸಾವಿರ ವರ್ಷಗಳಿಂದ ಈ ನೆಲದ ಜನರ ಮನಸ್ಸಿನಲ್ಲಿ ಗಟ್ಟಿಯಾಗಿ ನೆಲೆಯೂರಿದುದು. ಅಂತೆಯೇ ಅದು ಸಾಕಷ್ಟು ಏಳು ಬೀಳುಗಳನ್ನು ಕೂಡ ಕಂಡಿದೆ. ಅದು ಎದುರಿಸಿದ ಬಿಕ್ಕಟ್ಟುಗಳಲ್ಲಿ ಅದು ಎದುರಿಸಿದ ಅನ್ಯಭಾಷೆಗಳ ಆಕ್ರಮಣಗಳು ಮುಖ್ಯವಾದುದು. ಅದರ ಅಸ್ತಿತ್ವಕ್ಕೆ ಪೋಷಕವೂ, ಅಷ್ಟೇ ಮಾರಕವೂ ಆದುವುಗಳು ಈ ಇಂಗ್ಲಿಷ್, ಸಂಸ್ಕೃತ, ಹಿಂದಿ ಭಾಷೆಗಳೇ. ಈ ವಿಚಾರ ಸಂಕಿರಣದಲ್ಲಿ ಈ ನಾಲ್ಕು ಭಾಷೆಗಳು ಕೈಕೈ ಹಿಡಿದಂತೆ ಸದ್ಯದ ಸವಾಲನ್ನು ಎದುರಿಸಲು ಹೊರಟಿರುವುದು ವಿಶೇಷವೇ ಸರಿ.

ರಾಷ್ಟ್ರೀಯ ಶಿಕ್ಷಣ ನೀತಿ 2019ರ ಕರಡಿನಲ್ಲಿ ಮೇಲುನೋಟಕ್ಕಾದರೂ ಸ್ಥಳೀಯ ಭಾಷೆಗಳಿಗೆ ಪ್ರಾಶಸ್ತ್ಯ ನೀಡಲಾಗಿದೆ. ಭಾರತೀಯ ಭಾಷೆಗಳಲ್ಲಿ ವಿವಿಧ ವಿಷಯಗಳ ಗುಣಮಟ್ಟದ ಶಿಕ್ಷಣ ನೀಡುವ ಗುರಿ ಹೊಂದಲಾಗಿದೆ. ಹಾಗಾಗಿ ವಿವಿಧ ವಿಷಯಗಳನ್ನು ಕಲಿಸುವ ಮಾಧ್ಯಮವಾಗಿ ಸ್ಥಳೀಯ ಭಾಷೆಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಮುಂದಿನ ಸಂಶೋಧನೆ ಸಾಗಬೇಕಿದೆ.

ಈಗಲೂ ಕನ್ನಡ ಭಾಷೆ ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳಲ್ಲಿ ಶಿಕ್ಷಣದ ಮಾಧ್ಯಮವಾಗಿ ಅದನ್ನು ಒತ್ತರಿಸಿ ನೂಕಿ ಮೂಲೆಗೆ ಸೇರಿಸುತ್ತಿರುವ ಇಂಗ್ಲಿಷ್ ಭಾಷೆಯದೇ ದೊಡ್ಡ ಸಮಸ್ಯೆ. ನೆಲದ ಭಾಷೆಗೆ ಕಂಟಕವಾಗದ ಹಾಗೆ ಅದನ್ನು ಕಲಿಸುವುದು ಹೇಗೆ ಎಂಬ ಬಗ್ಗೆ ಇಂಗ್ಲಿಷ್ ಭಾಷೆಯ ಅಧ್ಯಾಪಕರು ಗಂಭೀರವಾಗಿ ಚಿಂತಿಸಬೇಕಿದೆ. ಇಂಗ್ಲಿಷನ್ನು ಒಂದನೆಯ ತರಗತಿಯಿಂದ ಎರಡನೇ ವರ್ಷದ ಪದವಿ ತರಗತಿಯವರೆಗೆ ಹತ್ತು ವರ್ಷಗಳ ಕಾಲ ಒಂದು ಭಾಷೆಯಾಗಿ ಕಲಿತರೂ ಅದನ್ನು